**ಕರ್ನಾಟಕ ಸರ್ಕಾರ**

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

E-mail:Commissioner.pue@gmail.com. * Ph. No.23361857, 23361858* Fax-23361852


ಸಂಖ್ಯೆ:ಪಿಯುಸಿ/ಶೈಶಾ-01/ಎನ್.ಎಸ್.ಕ್ಯೂ.ಎಫ್/02/2018-2019 ದಿನಾಂಕ:21-.06.2018

## ಜ್ಞಾಪನ

ವಿಷಯ: 2018-19ನೇ ಸಾಲಿಗೆ ಎನ್.ಎಸ್.ಕ್ಯೂ.ಎಫ್ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ:ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ -ಕರ್ನಾಟಕ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಇವರ ಪತ್ರ ಸಂಖ್ಯೆ ಆ5.ಎನ್.ಎಸ್.ಕ್ಯೂ.ಎಫ್.22/2016-2017 ದಿನಾಂಕ:- 25.01.2018

---

2018-19ನೇ ಸಾಲಿನಲ್ಲಿ ಎನ್.ಎಸ್.ಕ್ಯೂ.ಎಫ್ ವಿಷಯವನ್ನು ಅನುಷ್ಠಾನ ಮಾಡುತ್ತಿರುವ ಕಾಲೇಜುಗಳಲ್ಲಿ 2017-18ನೇ ಸಾಲಿನಲ್ಲಿ 10ನೇ ತರಗತಿಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳನ್ನು 11ನೇ ತರಗತಿಗೆ ಮತ್ತು 11 ನೇ ತರಗತಿಯಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾದ ಎಲ್ಲಾ ವಿದ್ಯಾರ್ಥಿಗಳು ಕಡ್ಡಾಯವಾಗಿ 12ನೇ ತರಗತಿಗೆ ಕ್ರಮವಾಗಿ ತಪ್ಪದೆ ದಾಖಲಾತಿ ಮಾಡಿಕೊಳ್ಳಲು ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರು ಸಂಬಂಧಿಸಿದ ಸೆಕ್ಟಾರ್‌ನ ತರಬೇತುದಾರರು ಪ್ರಥಮ ಆದ್ಯತೆಯಲ್ಲಿ ಕ್ರಮವಹಿಸಲು ಸೂಚಿಸಿದೆ. ಕಾಲೇಜುಗಳಲ್ಲಿ ನಿರ್ದಿಷ್ಟ ಪ್ರಮಾಣಕ್ಕಿಂತ ಕಡಿಮೆ ದಾಖಲಾತಿಯಾದಲ್ಲಿ ಆಯಾ ಕಾಲೇಜುಗಳ ಮುಖ್ಯಸ್ಥರು ಹಾಗೂ ಸಂಬಂಧಿಸಿದ ಸೆಕ್ಟಾರ್‌ನ ತರಬೇತುದಾರರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

2018-19 ನೇ ಸಾಲಿಗೆ ಈ ಕೆಳಕಂಡ ಸೆಕ್ಟಾರ್‌ಗಳಿಗೆ, ಸೆಕ್ಟಾರ್‌ಗಳ ಮುಂದೆ ಸೂಚಿಸಿರುವ ಸಂಸ್ಥೆಗಳಿಗೆ ತರಬೇತುದಾರರನ್ನು ನಿಯೋಜನೆ ಮಾಡಿಕೊಳ್ಳಲು ಕಾರ್ಯದೇಶವನ್ನು ನೀಡಲಾಗಿದೆ.

| Sl. No | Sector | Name & address of the Vocational Training Provider |
|---|---|---|
| 01 | IT / ITEs | M/s Quess Corp Limited, 3/3/2, Bellandur Gate, Sarjapur Road, Bengaluru – 560103. |
| 02 | Automobile | M/s Don Bosco Tech, BREADS, 75 North Road, , Bengaluru – 560 084. |
| 03 | Beauty & Wellness | M/s LAQSH job skills academy pvt ltd, 4th floor, A1 tower, Commercial block, Golden enclave, Old Airport road, Kodihalli, Bangalore-560 017. |

| | | |
|---|---|---|
| 04 | Retail | M/s Quess Corp Limited, 3/3/2, Bellandur Gate, Sarjapur Road, Bengaluru – 560103. |

ಸದರಿ ಸಂಸ್ಥೆಯವರು ಮಾಹಿತಿ ತಂತ್ರಜ್ಞಾನ, ಆಟೋಮೊಬೈಲ್, ಬ್ಯೂಟಿ ಮತ್ತು ವೆಲ್‌ನೆಸ್ ಹಾಗೂ ರಿಟೇಲ್ ಸೆಕ್ಟಾರ್‌ಗಳ ಅನುಷ್ಠಾನಿತ ಕಾಲೇಜುಗಳಲ್ಲಿ ತರಬೇತುದಾರರನ್ನು ನಿಯೋಜನೆ ಮಾಡುತ್ತಿದ್ದು, ಸಂಬಂಧಿಸಿದ ಪ್ರಾಂಶುಪಾಲರುಗಳು ಯಾವುದೇ ಸಕಾರಣ ನೀಡದೆ ನಿಯೋಜಿತ ತರಬೇತುದಾರರನ್ನು ಕರ್ತವ್ಯಕ್ಕೆ ಹಾಜರುಪಡಿಸಿಕೊಳ್ಳುವುದು. ಕರ್ತವ್ಯದ ಮೇಲೆ ಹಾಜರಾಗುವ ತರಬೇತುದಾರರು ನಿಗಧಿಪಡಿಸಿರುವ ವಿದ್ಯಾರ್ಹತೆಯನ್ನು ಪೂರ್ಣಗೊಳಿಸಿರುವ ಬಗ್ಗೆ ಸಂಬಂಧಿಸಿದ ಕಾಲೇಜುಗಳ ಮುಖ್ಯಸ್ಥರು ಖಾತರಿಪಡಿಸಿಕೊಳ್ಳುವುದು.

ಹೆಲ್ತ್‌ಕೇರ್ ಸೆಕ್ಟಾರ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೇ ಚಾಲನೆಯಲ್ಲಿರುವುದರಿಂದ ಮುಂದಿನ ಆದೇಶದವರಗೆ ಮಾಸಿಕ ಸಂಭಾವನೆ ರೂ.23,500/- ರಂತೆ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅತಿಥಿ ತರಬೇತುದಾರರನ್ನು ಮುಂದಿನ ಆದೇಶದವರೆವಿಗೂ ಮುಂದುವರೆಸಲು ಕಾಲೇಜು ಪ್ರಾಂಶುಪಾಲರಿಗೆ ಅನುಮತಿಸಿದೆ.

ಮುಂದುವರೆದಂತೆ, 11 ಮತ್ತು 12ನೇ ತರಗತಿಯಲ್ಲಿ ಎನ್.ಎಸ್.ಕ್ಯೂ.ಎಫ್ ವಿಷಯವನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ಭಾಗ-1 ರಲ್ಲಿ ಎರಡು ಭಾಷಾ ವಿಷಯಗಳಲ್ಲಿ ಒಂದು ಭಾಷೆ ಅಂದರೆ, ವಿದ್ಯಾರ್ಥಿಯು ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದಲ್ಲಿ ಕನ್ನಡ ಭಾಷೆಗೆ ವಿನಾಯಿತಿ ನೀಡಲಾಗುವುದು ಮತ್ತು ವಿದ್ಯಾರ್ಥಿಯು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದಲ್ಲಿ ಆಂಗ್ಲ ಭಾಷೆಗೆ ವಿನಾಯಿತಿ ನೀಡಲಾಗುವುದು.

ಈ ಹಿನ್ನಲೆಯಲ್ಲಿ 11 ಮತ್ತು 12ನೇ ತರಗತಿಯವರಗೆ ಎನ್.ಎಸ್.ಕ್ಯೂ.ಎಫ್ ವಿಷಯವನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ತರಬೇತುದಾರರು ಸೂಸೂತ್ರವಾಗಿ ತರಗತಿಗಳನ್ನು ನಡೆಸಲು ಅನುವಾಗುವಂತೆ ವೇಳಾಪಟ್ಟಿಯನ್ನು ಸಿದ್ದಪಡಿಸಲು ಕಾಲೇಜು ವಿಭಾಗದ ಪ್ರಾಂಶುಪಾಲರು ತಪ್ಪದೆ ಕ್ರಮವಹಿಸುವಂತೆ ಸೂಚಿಸಿದೆ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು

1. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, -ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಎನ್‌ಎಸ್‌ಕ್ಯೂಎಫ್ ಕಾಲೇಜುಗಳ ಪ್ರಾಂಶುಪಾಲರಿಗೆ ನಿರ್ದೇಶನ ನೀಡಲು ಸೂಚಿಸಿದೆ.
2. ಇ-ಆಡಳತ-ಅಂತರ್‌ಜಾಲದಲ್ಲಿ ಅಳವಡಿಸಲು
3. ಕಛೇರಿ ಪ್ರತಿ.